ಅನ್ನುಕೊಡುವುದರ ಜೊತೆಗೆ 4(1) notification ಆ ಸಂದರ್ಭದಲ್ಲಿ ಆಯಿತು 4(1) ನೋಟಿಫಿಕೇಷನ್ ಆದ ತಕ್ಷಣವೇ 6(1) ನೋಟಿಫಿಕೇಷನ್ ಆಗುವುದಿಲ್ಲವೆನ್ನುವಂಥದ್ದು ಏನಿದೆ, ಆ ಬಗ್ಗೆ ತಾವು ಆತಂಕ ಪಡಬೇಕಾದಂಥದ್ದು ಇಲ್ಲ ಈ ಸರ್ಕಾರ ಅಂಥ ದಿಶೆಯಲ್ಲಿ ಯೋಚನೆ ಮಾಡುತ್ತಿಲ್ಲ ತಾವು ಹೇಳಿದಂತೆ ಅದನ್ನು ಖಂಡಿತವಾಗಿಯೂ ಕೂಡ 525ರ ವರೆಗೆ ಇರತಕ್ಕಂಥದ್ದಕ್ಕೆ ನಾವು ಪರಿಹಾರವನ್ನು ಕೊಡಬೇಕಾಗುತ್ತದೆ, ಪುನರ್‌ವ್ಯವಸ್ಥೆಯ ಏರ್ಪಾಡುಗಳನ್ನು ಸಹ ಮಾಡಬೇಕಾಗುತ್ತದೆ ಇನ್ನು ಬಸ್ಸಿನ ವಿಚಾರವಾಗಿ ಹೇಳುವುದಾದರೆ, ತಾತ್ಕಾಲಿಕವಾಗಿ ಪುನರ್‌ವಸತಿಗೆ ಸಂಬಂಧಪಟ್ಟಂಥವರು ತಮ್ಮ ಹಳೆಯ ಊರಿಗೆ ಹೋಗಬೇಕಾಗುತ್ತದೆ ನವಗ್ರಾಮದ ಮೂಲಕವಾಗಿ ಅಲ್ಲಿಗೆ ಹೋಗಲಿಕ್ಕೆ ಬಹಳ ತೊಂದರೆಯಾಗುತ್ತದೆ ಎನ್ನುವಂಥ ಸಂದರ್ಭದಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಪುನರ್‌ವಸತಿಗೆ ಸಂಬಂಧಪಟ್ಟಿರತಕ್ಕಂಥವರು ಅದನ್ನು subsidize ಮಾಡಿದರು ಕೆ.ಎಸ್ ಆರ್ ಟಿ.ಸಿಗೆ ಸಂಬಂಧಪಟ್ಟಂತೆ ಒಂದೂವರೆ ರೂಪಾಯಿ ದರ ಇತ್ತು ಆ ಒಂದೂವರೆ ರೂಪಾಯಿಗಿಂತ ಮಿಕ್ಕಿ ಬಂದಂಥದ್ದು ಅಂದರೆ ಆ ಮೂರುವರೆ ರೂಪಾಯಿ ದರವನ್ನು ಪುನರ್‌ವಸತಿಗೆ ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳಾದ ಮಾನ್ಯ ಜಾಮ್‌ದಾರ್‌ರವರು ಇದರ ಬಗ್ಗೆ ವಿಶೇಷ ಸಹಾನುಭೂತಿಯಿಂದ ಒಂದು ಕಾಲಮಿತಿಯಾದ ಅವಧಿಯಲ್ಲಿ ಅದನ್ನು ನಾವು ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳಿದರು ಆದರೆ ಆ ಕಾಲಮಿತಿ ಈಗಾಗಲೇ ಮುಗಿದು ಹೋಗಿದೆ ಆದರೆ ಅದನ್ನು ನಿರಂತರವಾಗಿ ಕೊಡಲಿಕ್ಕೆ ನಮಗೆ ಸಾಧ್ಯವಾಗುವುದಿಲ್ಲ ಆದರೆ ಈಗ ಸ್ವಲ್ಪ ದಿವಸಗಳ ವರೆಗೆ ವಿಸ್ತರಿಸಬಹುದೇನೋ, ಮಾನ್ಯ ಶಾಸಕರು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ನಾನು ಶ್ರೀ ಜಾಮ್‌ದಾರರ ಜೊತೆಗೆ ಕೂಡ ಸರ್ಕಾರದ ಮಾತನಾಡಿ ಇನ್ನು ಸ್ವಲ್ಪ ದಿವಸಗಳ ಕಾಲಕ್ಕಾದರೂ ಕೂಡ ಇದರ ವ್ಯವಸ್ಥೆ ಮಾಡಬಹುದೆಂದು ಹೇಳುತ್ತೇನೆ ಪೂರ್ಣ ಮಾಹಿತಿ ಬಂದಮೇಲೆ ಮನ್ಯ ಶಾಸಕರಿಗೆ ಈ ವಿಚಾರವನ್ನು ತಿಳಿಸುತ್ತೇನೆ

ವಿಷಯ (ಐ) ರಾಜಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕೊಳಚೆ ನಿರ್ಮೂನ ಮಂಡಳಿ ನೋಟಿಫೈ ಮಾಡಿದ ಜಾಗದಲ್ಲಿರುವ ಅಂಗನವಾಡಿ ಕೇಂದ್ರವನ್ನು ತೆರವು ಗೊಳಿಸಿರುವ ಬಗ್ಗೆ

†**ಶ್ರೀ ಎನ್ ಎಲ್ ನರೇಂದ್ರ ಬಾಬು (ರಾಜಾಜಿನಗರ)** ಮಾನ್ಯ ಅಧ್ಯಕ್ಷರೆ, ನಮ್ಮ ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಪಶ್ಚಿಮಕಾರ್ಡ್ ರಸ್ತೆಯ ಶಿವನಹಳ್ಳಿ ಸರ್ವೆ ನಂಬರ್ 5 ಹಾಗೂ 8ರ ಮಧ್ಯದಲ್ಲಿ slum clearance board notify ಮಾಡಿರತಕ್ಕಂಥ ಗುಡಿಸಲುಗಳು, ಗುಡಿಸಲು ಮನೆಗಳು, ಇಲ್ಲಿ ಪರಿಶಿಷ್ಟ ಜಾತಿ ಹಿಂದುಳಿದ ವರ್ಗದವರು ಮತ್ತು ಆರ್ಥಿಕವಾಗಿ ದುರ್ಬಲವರ್ಗದವರು ವಾಸಿಸುತ್ತಿರುವಂಥ ಮನೆಗಳನ್ನು ಕಳೆದ ಮೂರು ದಿವಸಗಳ ಹಿಂದಿನಿಂದ ಹಿರಂತರವಾಗಿ ಪಟ್ಟಭದ್ರ ಹಿತಾಸಕ್ತಿಗಳು ಆ ಜಾಗವನ್ನು slum clearance board notify ಮಾಡಿದ್ದರೂ ಸಹ, ನಾನು ಪೊಲೀಸ್ ಇಲಾಖೆಯ ಗಮನಕ್ಕೂ ತಂದಿದ್ದೇನೆ, ಅವರು ಅದನ್ನು demolish ಮಾಡಿ ಅಲ್ಲಿ ನಡೆಯುತ್ತಿದ್ದಂಥ ಅಂಗನವಾಡಿ ಕೇಂದ್ರದ ಸಾಮಾನನ್ನು ತೆಗೆದು ಹೊರಗೆ ಹಾಕಿರುವಂಥದ್ದು ಮತ್ತು ಅಲ್ಲಿ ನೆಲೆಸಿರತಕ್ಕಂಥ ಬಡಜನ, ಹಿಂದುಳಿದ ಮತ್ತು ಪರಿಶಿಷ್ಟ ಜನ ನಿನ್ನೆ ರಾತ್ರಿಯಷ್ಟೇ ನನ್ನ ಬಳಿ ಬಂದು ಅವರ ಭಯ ಮತ್ತು ಆತಂಕವನ್ನು ವ್ಯಕ್ತಪಡಿಸಿದ್ದಾರೆ ಅವರಿಗೆ ಯಾವ ರೀತಿಯಾದಂಥ ಬೆದರಿಕೆಯನ್ನು ಹಾಕಿದ್ದಾರೆಂದರೆ, ನೀವೇನಾದರೂ ಖಾಲಿ ಮಾಡದೇ ಹೋದರೆ ಆ ಜಾಗದಲ್ಲಿ ನಾವು ಬೇರೆ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ ಎನ್ನತಕ್ಕಂಥ ಬೆದರಿಕೆಯನ್ನು ಹಾಕಿದ್ದಾರೆ

ನಾನು ತಮ್ಮ ಮುಖೇನ ಹಾಗೂ ಈ ಸದನದಲ್ಲಿ ಏನಂತಿಸುವುದೇನೆಂದರೆ, ಇದರ ಬಗ್ಗೆ ಆ ಜನಗಳಿಗೆ ರಕ್ಷಣೆ ಕೊಡಬೇಕು, ಈಗಾಗಲೇ ಏನು slum clearance board notify ಮಾಡಲಿಕ್ಕೆ ಕ್ರಮವನ್ನು ತೆಗೆದುಕೊಂಡಿದೆ, ಅದನ್ನು ಆದಷ್ಟು ಬೇಗ, ಮಾಡಿ, ಅಲ್ಲಿ ಬಡವರು ಸುಮಾರು 20–25 ವರ್ಷಗಳಿಂದ ಆ ಜಾಗದಲ್ಲಿ ಏನು ನೆಲೆಸಿದ್ದಾರೆ, ಅವರಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕು, ಇಲ್ಲದಿದ್ದರೆ ಅಲ್ಲಿ ಬಹಳಷ್ಟು ಜನಗಳಿಗೆ ಕಷ್ಟವಾಗುತ್ತದೆ ಅಲ್ಲಿರತಕ್ಕಂಥ ಜನ ಅವರಿಗೆ ಬಾಯಿ ಇಲ್ಲದಂಥ ರೀತಿಯಲ್ಲಿ ಆಗಿದ್ದಾರೆ ದಯವಿಟ್ಟು ತಮ್ಮ ಮುಖೇನ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, slum clearance board notify ಮಾಡಿರತಕ್ಕಂಥ proceedings ಅನ್ನು ಮುಂದುವರಿಸಿ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿಯ ಜನರಿಗೆ ರಕ್ಷಣೆ ಕೊಡಬೇಕು ಮತ್ತು ಅಂಗನವಾಡಿ ಕೇಂದ್ರದ ಟೀಚರ್‌ಗೆ ಸಹ ಬೆದರಿಕೆ ಹಾಕಿದ್ದಾರೆ ಬಸವೇಶ್ವರನಗರ ಪೊಲೀಸ್ ಠಾಣೆಗೆ ಈ ಬಗ್ಗೆ ದೂರನ್ನು ಕೊಟ್ಟಿರತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ ಈ ರೀತಿ ನೆಲವನ್ನು ಕಬಳಿಸತಕ್ಕಂಥ ಅಥವಾ ಕಾನೂನಿನ ರೀತಿಯಲ್ಲಿ ಅಲ್ಲಿ proceedings ಆಗದೇ ಇರುವಾಗ ಅವರು ನೆಲವನ್ನು ಅಥವಾ ಮನೆಗಳನ್ನು ಒಡೆಯಲಿಕ್ಕೆ ಹೇಗೆ ಸಾಧ್ಯ? Karnataka Municipal ಕಾಯಿದೆ ಹಾಗೂ buildings ಬೈಲಾ ಪ್ರಕಾರವಾಗಿ ಯಾವುದೇ ಕಟ್ಟಡವನ್ನು demolish ಮಾಡಬೇಕಾದರೆ ಕಟ್ಟಬೇಕಾದರೆ ಇವರು ಅನುಮತಿಯನ್ನು ಸಂಬಂಧಪಟ್ಟ Local bodies ನಿಂದ ತೆಗೆದುಕೊಳ್ಳಬೇಕು ಅದ್ಯಾವುದೂ ತೆಗೆದುಕೊಳ್ಳದೆ ಇವತ್ತು ಮಾಡಿರತಕ್ಕಂಥದ್ದು ಆತಂಕ ಉಂಟುಮಾಡಿದೆ ಎನ್ನುವುದರ ಬಗ್ಗೆ ಈ ಸಂದರ್ಭದಲ್ಲಿ ತಮ್ಮ ಮೂಲಕ ಸಂಬಂಧಪಟ್ಟವರ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈಗತಾನೆ ಈ ವಿಷಯ ಪ್ರಸ್ತಾಪಿಸಲ್ಪಟ್ಟಿದೆ ಬಹಳ ಗುರುತರವಾದಂಥ ವಿಚಾರಗಳಿವೆ ನಾನು ಈ ಕೂಡಲೇ ಅಧಿಕಾರಿಗಳ ಜೊತೆಗೆ ಮಾತನಾಡಿ ಸಾಧ್ಯವಾದರೆ ಈ ದಿವಸವೇ ಇಲ್ಲದಿದ್ದರೆ ನಾಳೆ ಮಾನ್ಯ ಶಾಸಕರಿಗೆ ಸಂಪೂರ್ಣ ಮಾಹಿತಿಯನ್ನು ಕೊಡತಕ್ಕಂಥದ್ದನ್ನು ಮಾಡುತ್ತೇವೆ ರಕ್ಷಣೆಯನ್ನು ಖಂಡಿತವಾಗಿ ಕೊಡುತ್ತೇವೆ

ವಿಷಯ(ಕ) ತುಮಕೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ

ಶ್ರೀ ಕೆ ಎನ್ ರಾಜಣ್ಣ (ಬೆಳ್ಳಾವಿ) ತುಮಕೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ವಶದಲ್ಲಿರತಕ್ಕಂಥ ರಸ್ತೆಗಳು, ಜಿಲ್ಲಾ ಪಂಚಾಯತಿ ವಶದಲ್ಲಿ ಬರತಕ್ಕಂಥ ರಸ್ತೆಗಳು ಅದು ಎಷ್ಟು ಹಾಳಾಗಿದೆ ಎಂದರೆ ಯಾರಾದರೂ ಗರ್ಭಿಣಿ ಹೆಂಗಸು ಆ ರಸ್ತೆಯಲ್ಲಿ ಪ್ರಯಾಣ ಮಾಡಿದರೆ ಆಸ್ಪತ್ರೆಗೆ ತಲುಪತಕ್ಕಂಥ ಅವಶ್ಯಕತೆಯೇ ಇರುವುದಿಲ್ಲ ಆ ಮಟ್ಟಕ್ಕೆ ಆ ರಸ್ತೆಗಳು ಹಾಳಾಗಿವೆ ಅಂಥ ರಸ್ತೆಗಳನ್ನು ದುರಸ್ತಿ ಮಾಡಲಿಕ್ಕೆ ಪದೇ ಪದೇ ಸಂಬಂಧಪಟ್ಟಂಥ ಇಲಾಖೆಯ ಅಧಿಕಾರಿಗಳಿಗೆ ನಾವು ಮನವಿಮಾಡಿದರೂ ಕೂಡ ಕ್ರಮ ಜರುಗಿಸಿಲ್ಲ ಎಂದು ಹೇಳಿ 15ನೇ ತಾರೀಖು ಆ ರಸ್ತೆಯಲ್ಲಿ ಓಡಾಡತಕ್ಕಂಥ ಪ್ರಯಾಣಿಕರು ಎಲ್ಲರೂ ಕೂಡಿ 28– ಪ್ರತಿಭಟನೆಯನ್ನು ಮಾಡಿದ್ದಾರೆ, ಇಷ್ಟೊಂದು ಜನರಿಂದ ಅಲ್ಲಿ ಪ್ರತಿಭಟನೆ ಇದ್ದರೂ ಕೂಡ ಈ ಬಗ್ಗೆ ಸೂಕ್ತ ಗಮನವನ್ನು ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ವಹಿಸಿಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಾ ಈ ಒಂದು ವಿಚಾರದಲ್ಲಿ ಸರ್ಕಾರದ ವತಿಯಿಂದ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕು ಲೋಕೋಪಯೋಗಿ